## ವಿಧಾನ ಪರಿಷತ್ ಸದಸ್ಯರಾದ ಶ್ರೀ ರಾಮಪ್ಪ ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.1704ಕ್ಕೆ ಉತ್ತರ

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಪದವಿ ಮತ್ತು ಪದವಿ ಪೂರ್ವ ಹಾಗೂ ಮೆಟ್ರಿಕ್-ಪೂರ್ವ ವಸತಿನಿಲಯಗಳ ಸಂಖ್ಯೆ ಎಷ್ಟು; ಯಾವ ಯಾವ ವರ್ಷದಲ್ಲಿ ಪ್ರಾರಂಭಿಸಲ್ಪಟ್ಟಿವೆ; ಹಾಗಿದ್ದಲ್ಲಿ, ಸಿಬ್ಬಂದಿಗಳನ್ನು ನೇಮಕಾತಿ ಮಾಡಲಾಗಿದೆ; (ವೃಂದವಾರು ವಿವರವಾದ ಮಾಹಿತಿ ನೀಡುವುದು) ಇಲ್ಲದಿದ್ದಲ್ಲಿ, ಕಾರಣವೇನು; | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಮೆಟ್ರಿಕ್-ನಂತರದ 1148 ಮತ್ತು ಮೆಟ್ರಿಕ್-ಪೂರ್ವ 1279 ಹೀಗೆ ಒಟ್ಟು 2427 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ.<br><br>ವರ್ಷವಾರು ಜಿಲ್ಲಾವಾರು ಮಂಜೂರಾಗಿರುವ ವಿದ್ಯಾರ್ಥಿನಿಲಯಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಿಗೆ ಮಂಜೂರಾಗಿರುವ ಹಾಗೂ ಭರ್ತಿಯಾಗಿರುವ ಸಿಬ್ಬಂದಿಗಳ ವಿವರ ಕೆಳಕಂಡಂತಿರುತ್ತದೆ. |

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ವಿವರ | | | ಖಾಲಿ ಹುದ್ದೆಗಳ ಭರ್ತಿಗೆ ವಹಿಸಿರುವ ಕ್ರಮ |
|---|---|---|---|---|---|
| | | ಮಂಜೂರು | ಭರ್ತಿ | ಖಾಲಿ | |
| 1 | ನಿಲಯ ಮೇಲ್ವಿಚಾರಕರು | 2427 | 1285 | 1142 | 1. 231 ಹುದ್ದೆಗಳ ಭರ್ತಿಗೆ ಕೆ.ಪಿ.ಎಸ್.ಸಿ ಯಿಂದ ಪರೀಕ್ಷೆ ನಡೆಸಲಾಗಿದ್ದು, ಅಂತಿಮ ಆಯ್ಕೆಪಟ್ಟಿ ನಿರೀಕ್ಷಣೆಯಲ್ಲಿದೆ.<br>2. 797 ಹುದ್ದೆಗಳ ಭರ್ತಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. |
| 2 | ಅಡುಗೆಯವರು | 5467 | 2176 | 3291 | 1547 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಗೆ ಅಧಿಸೂಚನೆ ಹೊರಡಿಸಿದ್ದು, ಹಾಲಿ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. |
| 3 | ಅಡುಗೆ ಸಹಾಯಕರು | 3384 | 807 | 2577 | 2470 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಗೆ ಅಧಿಸೂಚನೆ ಹೊರಡಿಸಿದ್ದು, ಹಾಲಿ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. |
| 4 | ರಾತ್ರಿ ಕಾವಲುಗಾರರು | 813 | 97 | 716 | - |

| | | |
|---|---|---|
| ಆ) | ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆ, ನವೋದಯ ವಸತಿಶಾಲೆ ಹಾಗೂ ಏಕಲವ್ಯ ವಸತಿಶಾಲೆಗಳೆಷ್ಟು; ಸದರಿ ವಸತಿಶಾಲೆಗಳಿಗೆ ಮಂಜೂರಾದ ಸಿಬ್ಬಂದಿಗಳೆಷ್ಟು; ಮಂಜೂರಾದ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದೆಯೇ; (ವೃಂದವಾರು ವಿವರ ನೀಡುವುದು) | ಕರ್ನಾಟಕ ವಸತಿಶಿಕ್ಷಣ ಸಂಸ್ಥೆಗಳ ಸಂಘದಿಂದ ಉತ್ತರಿಸಬೇಕಾಗಿದೆ. |
| ಇ) | ಹಾಗಿದ್ದಲ್ಲಿ, ವಸತಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲಾಗಿದೆಯೇ; ಹಾಗಿದ್ದಲ್ಲಿ, ಪೂರ್ಣಗೊಂಡ ಮತ್ತು ಅಪೂರ್ಣಗೊಂಡ ಕಾಮಗಾರಿಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 1314 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗಿದೆ.<br><br>ಪೂರ್ಣಗೊಂಡಿರುವ ಮತ್ತು ನಿರ್ಮಾಣ ಹಂತದಲ್ಲಿರುವ ಕಾಮಗಾರಿಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| ಈ) | ಸದರಿ ವಸತಿನಿಲಯಗಳು ಗುತ್ತಿಗೆ ಆಧಾರದ ಮೇಲೆ ಊಟ ಉಪಚಾರಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಲ್ಲಿ ಕಳಪೆಮಟ್ಟದ ಊಟ ಉಪಚಾರ ಮತ್ತು ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಕ್ರಮವೇನು; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಯಾವುದೇ ವಿದ್ಯಾರ್ಥಿನಿಲಯಗಳಲ್ಲಿ ಊಟೋಪಚಾರವನ್ನು ನೀಡಲು ಗುತ್ತಿಗೆ ವಹಿಸಿರುವುದಿಲ್ಲ.<br><br>ಇಲಾಖೆಯ ಅಡುಗೆ ಸಿಬ್ಬಂದಿಗಳೇ ನಿಲಯಗಳಲ್ಲಿ ಊಟವನ್ನು ತಯಾರಿಸುವ ಕಾರ್ಯ ನಿರ್ವಹಿಸುತ್ತಾರೆ. |
| ಉ) | ಸದರಿ ವಸತಿನಿಲಯದ ವಿದ್ಯಾರ್ಥಿಗಳಿಗೆ ಏನೇನು ಸೌಲಭ್ಯಗಳನ್ನು ವಿತರಿಸಲಾಗುವುದು; ಇದಕ್ಕೆ ಆಗುವ ಖರ್ಚು ಎಷ್ಟು (ವಿವರ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳು / ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ. |

| | | |
|---|---|---|
| ಊ) | ಕಳೆದ 4 ವರ್ಷಗಳಿಂದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಇರುವ ನಿಗಮಗಳೆಷ್ಟು; ಸದರಿ ನಿಗಮಗಳ ವಿವಿಧ ಯೋಜನೆಗಳಿಗೆ ಮಂಜೂರಾದ ಹಣ ಎಷ್ಟು; | ಸಂಬಂಧಪಟ್ಟ ನಿಗಮಗಳು ಉತ್ತರಿಸಬೇಕಾಗಿದೆ. |
| ಋ) | ರಾಯಚೂರು ಜಿಲ್ಲೆಗೆ ಕಳೆದ 3 ವರ್ಷಗಳಿಂದ ಪರಿಶಿಷ್ಟ ಜಾತಿ/ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಿಗೆ ಮಂಜೂರಾದ/ಖರ್ಚಾದ ಹಣ ಎಷ್ಟು; (ವರ್ಷಾವಾರು ವಿವರ ನೀಡುವುದು) ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ವಿವಿಧ ಯೋಜನೆಗಳಿಗೆ ಮಂಜೂರಾದ ಹಣ ಎಷ್ಟು; ಇದರ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಜಾತಿವಾರು ವಿವರ ನೀಡುವುದು) | ಸಂಬಂಧಪಟ್ಟ ನಿಗಮಗಳು ಉತ್ತರಿಸಬೇಕಾಗಿದೆ. |
| ಎ) | ಸದರಿ ಯೋಜನೆಗಳಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಕ್ರಮವೇನು? (ವಿವರ ನೀಡುವುದು) | ಸಂಬಂಧಪಟ್ಟ ನಿಗಮಗಳು ಉತ್ತರಿಸಬೇಕಾಗಿದೆ. |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.